ಶ್ರೀ ಬಸವರಾಜ ರಾಯರೆಡ್ಡಿ: ರಾಜ್ಯದಲ್ಲಿರತಕ್ಕ ಆಸ್ಪತ್ರೆ ಕಟ್ಟಡಗಳು ಈ ರೀತಿಯಲ್ಲಿವೆ. ಇವುಗಳನ್ನು ಸಂಬಂಧಪಟ್ಟವರಿಗೆ ಹ್ಯಾಂಡ್‌ಓವರ್ ಮಾಡಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಇದು ಜಿಲ್ಲಾ ಪರಿಷತ್ತಿನವರಿಗೆ ಸೇರಿದ್ದು ಎಂದು ಅವರು ಹೇಳುತ್ತಿದ್ದಾರಲ್ಲಾ.

ಶ್ರೀ ಬಸವರಾಜ ರಾಯರೆಡ್ಡಿ: ಜಿಲ್ಲಾ ಪರಿಷತ್ ವ್ಯವಸ್ಥೆಯಲ್ಲಿ ಈ ರೀತಿ ಆಗಿಲ್ಲ. ಐ.ಪಿ.ಪಿ. ಪ್ರಾಜೆಕ್ಟ್ ಏನಿವೆ, ಅವು ರಾಜ್ಯಸರ್ಕಾರಕ್ಕೆ ಬರುತ್ತವೆ. ಇದನ್ನು ಹ್ಯಾಂಡ್ ಓವರ್ ಮಾಡಿಕೊಂಡು ಮುಂದಿನ ಕೆಲಸಮಾಡಬಹುದಲ್ಲವೆ? ಆದ್ದರಿಂದ ದಯವಿಟ್ಟು ಅವುಗಳನ್ನು ಹ್ಯಾಂಡ್ ಓವರ್ ಮಾಡಲಿಕ್ಕೆ ಏನು ತೊಂದರೆ ಇದೆ? ಏತಕ್ಕೆಂದರೆ ಇದು ಕೇವಲ ಒಂದು ತಾಲ್ಲೂಕಿನಲ್ಲಿಯೇ ಅಲ್ಲ, ಕೆಲವು ಐ.ಪಿ.ಪಿ. ಪ್ರಾಜೆಕ್ಟ್‌ಗಳೆಂದು ಹೇಳಿ, ಕೆಲಸ ಆಗಿರುವುದನ್ನು ಸಹ ಹ್ಯಾಂಡ್‌ಓವರ್ ಮಾಡಿಕೊಂಡಿಲ್ಲ. ಅದನ್ನು ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಅಲ್ಲಿ ಜಾನುವಾರುಗಳು ಮಲಗುತ್ತಿವೆ, ಬೇಕಾದರೆ ಅದರ ಫೋಟೋ ಸಹ ಇರುತ್ತದೆ, ತೋರಿಸುತ್ತೇನೆ. ಮೂವತ್ತು ಹಾಸಿಗೆಯ ಆಸ್ಪತ್ರೆ ಅದು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಅದಕ್ಕೆ ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಬೇಕಾಗಿದ್ದರೂ ಸಹ ಈಗ ಏನೇನು ಎಲ್ಲೆಲ್ಲಿ ಇವೆಯೆಂದು ನೋಡಿಸಿ ನಾವು ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಈಗ ಶ್ರೀ ಎಂ.ಎಸ್. ಆತ್ಮಾನಂದ ಅವರು 1654ನೇ ಪ್ರಶ್ನೆ ಕೇಳಬಹುದು. (ಮಾನ್ಯ ಸದಸ್ಯರು ಹಾಜರಿರಲಿಲ್ಲ)

Mr. Speaker: S.Q.No. 244 (1675) M.P. Venkatesh - (not present),

Sri Azeez Sait: : Same question is being put again and again.

Mr. Speaker: That is why he did not come.

Sri Azeez Sait: I would like to bring to your notice that some person working in Legislature department is aproaching Members to put this question again and again. I have replied this already.

Mr. Speaker: I will have it looked into.

ನೆಲಮಂಗಲದಲ್ಲಿ ಸರ್ಕಾರಿ ಪದವಿಪೂರ್ವ ಮಹಾವಿದ್ಯಾಲಯ.

1148 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಟೌನಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಒಟ್ಟು ಎಷ್ಟು ಜನ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ.

ಆ) ವ್ಯಾಸಂಗಕ್ಕೆ ಇರುವ ಕೊಠಡಿ ಸಂಖ್ಯೆ ಎಷ್ಟು?

ಇ) ಕಾಲೇಜಿನಲ್ಲಿ ಕೊಠಡಿಗಳ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಇನ್ನೂ ಹೆಚ್ಚಿನ ಕೊಠಡಿಗಳನ್ನು ನಿರ್ಮಿಸಲು ಸರ್ಕಾರ ಏನು ಕ್ರಮ ತೆಗೆದುಗೊಂಡಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ಸಚಿವರು):

ಅ) ವಿದ್ಯಾರ್ಥಿಗಳು - 296
ವಿದ್ಯಾರ್ಥಿನಿಯರು - 324
ಒಟ್ಟು 530

ಆ) 11 ಕೊಠಡಿಗಳು

ಇ) 10 ಅಧಿಕ ಕೊಠಡಿಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಇದೆ.

ಶ್ರೀ ಅಂಜನಮೂರ್ತಿ: ಮಾನ್ಯ ಅಧ್ಯಕ್ಷರೇ, ನಾನು ನೆಲಮಂಗಲ ಟೌನಿನಲ್ಲಿರತಕ್ಕಂಥ ಪದವಿ ಪೂರ್ವ ಕಾಲೇಜಿನಲ್ಲಿ ಎಷ್ಟು ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆಂಬುದಕ್ಕೆ ಉತ್ತರವಾಗಿ ವಿದ್ಯಾರ್ಥಿಗಳು 296, ವಿದ್ಯಾರ್ಥಿನಿಯರು 324 ಹಾಗೂ ಒಟ್ಟು ಹನ್ನೊಂದು ಕೊಠಡಿಗಳು ಎಂದು ಹೇಳಿರುತ್ತಾರೆ. ಆದರೆ ಅಲ್ಲಿ ನಿಜವಾಗಿಯೂ ಎಂಟು ಕೊಠಡಿಗಳು ಮಾತ್ರ ಇರುತ್ತವೆ. ಈ ಪದವಿ ಪೂರ್ವ ಕಾಲೇಜು 1956ರಲ್ಲಿ ಪ್ರಾರಂಭವಾದುದು ಧಾನಿಗಳ ಮೂಲಕ. ಇವತ್ತು ಶಿಫ್ಟ್ ಮೂಲಕ ಕ್ಲಾಸ್ ನಡೆಯುತ್ತಿದೆ. ಅಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಬಹಳ ತೊಂದರೆಯಾಗಿದೆ, ನಾನು ಮಾನ್ಯ ವಿದ್ಯಾಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. 10 ಅಧಿಕ ಕೊಠಡಿ ಕೊಡಲು ಪ್ರಸ್ತಾವನೆ ಇದೆ ಎಂದು ಹೇಳುತ್ತೀರಿ, ದಯವಿಟ್ಟು ಅದು ಪ್ರಸ್ತಾವನೆಯಲ್ಲಿಯೇ ಇರಬಾರದು, ಆದಷ್ಟು ಬೇಗನೆ ಹೆಚ್ಚಿನ ಕೊಠಡಿಗಳನ್ನು ಕಟ್ಟಿಸಿ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ನೆಲಮಂಗಲದ ಪದವಿಪೂರ್ವ ಸಂಯುಕ್ತ ಕಾಲೇಜಿನ ಕೊಠಡಿಗಳ ಅವಶ್ಯಕತೆಯ ಬಗ್ಗೆ ಸರ್ಕಾರಕ್ಕೆ ಮನದಟ್ಟಾಗಿದೆ. ಆದ್ದರಿಂದ 1991-92ನೇ ವರ್ಷದಲ್ಲಿ ಈ ಕೆಲವು ಕೊಠಡಿಗಳನ್ನು ಕಟ್ಟಿಸಿ ಕೊಡಲಿಕ್ಕೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅಂಜನಮೂರ್ತಿ: ಈ ಬಗ್ಗೆ ಅನೇಕ ಮನವಿಗಳನ್ನು ಸಲ್ಲಿಸಿದ್ದರೂ ಸಹ ಇದುವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು: ಚುಕ್ಕೆ ಪ್ರಶ್ನೆ 248 (1496) ಶ್ರೀ ಜಿ.ಎಸ್. ಆಚಾರ್ ಅವರ ಪರವಾಗಿ ಮಾನ್ಯ ಸದಸ್ಯರಾದ ಬಸವರಾಜ್‌ರವರು ಕೇಳಬಹುದು.

ಬೈಂದೂರಿನಲ್ಲಿರುವ ಸರ್ಕಾರಿ ಮಹಾವಿದ್ಯಾಲಯದ ಕಟ್ಟಡ

1497 - ಶ್ರೀ ಜಿ.ಎಸ್. ಆಚಾರ್ : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ವಿಳಂಬವಾಗಲು ಕಾರಣಗಳೇನು?

ಆ) ಈಗ ಕಟ್ಟಿಸುವ ಕಟ್ಟಡ ಏನೇನೂ ಸಾಲದಾಗಿದ್ದು, ಹೆಚ್ಚುವರಿ ಕೋಣೆಗಳನ್ನು ರಚನೆಗೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) 1990-91ನೇ ಸಾಲಿನಲ್ಲಿ ಕಾಲೇಜು ಕಟ್ಟಡಗಳಿಗೆ ಆಯವ್ಯಯದಲ್ಲಿ ಯೋಜನೆಯಡಿಯಲ್ಲಿ ಅವಕಾಶ ಒದಗಿಸಿಲ್ಲವಾದ್ದರಿಂದ ನಿರ್ಮಾಣ ಕಾರ್ಯ ವಿಳಂಬವಾಗಿದೆ. ಆಕರೆ 1991-92ರಲ್ಲಿ ಈ ಉದ್ದೇಶಕ್ಕಾಗಿ ಹಣ ಒದಗಿಸಲಾಗಿದೆ.

ಆ) 1988-89ನೇ ಸಾಲಿನಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಪ್ರಾರಂಭಿಸುವ ಈ ಕಟ್ಟಡದ ನಿರ್ಮಾಣ ಕಾರ್ಯ ಆರು ಕೊಠಡಿಗಳನ್ನೊಳಗೊಂಡಿದೆ.